International Journal of Kannada Research 2018; 4(3): 34-35

International Journal of Kannada Research
www.kannadajournal.com

**ISSN: 2454–5813**
IJKR 2018; 4(3): 34-35
© 2018 IJKR
www.kannadajournal.com
Received: 10-05-2018
Accepted: 11-06-2018

**ಕೃಷ್ಣಪ್ಪ ತಂದೆ, ಕರೆಪ್ಪ**
ಸಂಶೊಧನಾ ವಿದ್ಯಾರ್ಥಿ, ಕನ್ನಡ ಅಧ್ಯಾಯನ ವಿಭಾಗ, ಗುಲಬರ್ಗಾ ವಿಶ್ವವಿದ್ಯಾಯಲಯ ಕಲಬುರಗಿ

**Correspondence**
**ಕೃಷ್ಣಪ್ಪ ತಂದೆ, ಕರೆಪ್ಪ**
ಸಂಶೊಧನಾ ವಿದ್ಯಾರ್ಥಿ, ಕನ್ನಡ ಅಧ್ಯಾಯನ ವಿಭಾಗ, ಗುಲಬರ್ಗಾ ವಿಶ್ವವಿದ್ಯಾಯಲಯ ಕಲಬುರಗಿ

# ಗ್ರಾಮದೇವತೆಗಳ ಪರಿಕಲ್ಪನೆ

**ಕೃಷ್ಣಪ್ಪ ತಂದೆ, ಕರೆಪ್ಪ**

ಗ್ರಾಮದೇವತೆಗಳೆಂದರೆ ಮಾತೃದೇವತಾ ಪಂಥದ ಜನಪದ ರೂಪಗಳೆ ಗ್ರಾಮದೇವತೆಗಳು. ಗ್ರಾಮಿಣ ಜನರಲ್ಲಿ ಹುಟ್ಟಿಕೊಂಡಿರುವುದು. ಭಯ, ಭಕ್ತಿ, ಭೀತಿಯಿಂದ ಹುತ್ತ, ವೃಕ್ಷ, ಶಿಲೆಗಳನ್ನು ಆರಾಧಿಸುತ್ತಿದ್ದ ಗ್ರಾಮೀಣರು ಒಂದು ಕಾಲದಲ್ಲಿ ಅವುಗಳಿಂದ ಗ್ರಾಮದೇವತೆಗಳನ್ನು ಕಂಡುಕೊಂಡರು. ಹೀಗೆ ಜನರು ತಮ್ಮ ಜೀವನದ ಅನುಭವದಿಂದಲೆ ಹುಟ್ಟಿದ ಪುರಾಣ ಮತ್ತು ಕಥೆಗಳನ್ನೆ ದೇವತೆಗಳ ಚರಿತ್ರೆಗೆ ಅನುಗುಣವಾಗುವಂತೆ ಜೋಡಿಸಿದರು. ಹಾಗೆ ದೇವರ ಪರಿಕಲ್ಪನೆಯು ಎಂದು ಸಾಕ್ರೆಟೀಸ್ ಹೇಳುವಂತೆ "ದೇವರ ಹುಟ್ಟು ಭಯ ಭೀತಿಯಿಂದಾಗಿದೆ. ಮೊದಲು ಕಾಡು ಮಾನವನಿಗೆ ಭಯವನ್ನುಂಟುಮಾಡಿದ ಹೊಳೆ, ಹಳ್ಳ, ನದಿ, ಗುಡ್ಡ, ಮರ, ಅಗ್ನಿ, ಹಾವು, ಹುಲಿ, ಸೂರ್ಯ, ಚಂದ್ರ, ನಕ್ಷತ್ರ, ಮೋಡಗಳೆಲ್ಲ ಅವನ ಪಾಲಿಗೆ ದೈವದ ವಸ್ತುಗಳೆಂದು ಅರಿತುಕೊಂಡನು".

"ಹೋಳೆ ಹಳ್ಳ ನದಿಯಿಂದ ನೀರು ಹರಿಯುವದನ್ನು ನೋಡಿ ಗುಡ್ಡ ಬೃಹದಾಕಾರದಲ್ಲಿ ನಿಂತಿದ್ದು ನೋಡಿ ಕತ್ತಲಿನಿಂದ ತುಂಬಿದ ಗುಹೆಯನ್ನು ನೋಡಿ ಆದಿಮಾನವ ಭಯಗೊಂಡನು." ಮುಗಿಲೆತ್ತರಕ್ಕೆ ಬೆಳೆದುನಿಂತ ಮರ, ಧಗಧನೆ ಕಾಡನ್ನು ಸುಡುವ ಬೆಂಕಿ, ತನ್ನನ್ನು ತಿನ್ನಲು ಬರುವ ಹುಲಿ, ಸಿಂಹ ಚಿರತೆಗಳನ್ನು ನೋಡಿ ಭಯಗೊಂಡನು. ಹೀಗೆ ಮನುಷ್ಯ ತನ್ನ ಜೀವ ರಕ್ಷಣೆಗಾಗಿ ಮತ್ತು ಅವುಗಳಿಂದುಳಿಯಲು ಅವುಗಳ ಆರಾಧನೆ ಆರಂಭಿಸಿದನು. ರಾತ್ರಿ ಹೊತ್ತು ಬೆಳಕನ್ನುಂಟುಮಾಡುವ ಚಂದ್ರ ಅಲ್ಲಲ್ಲಿ ಮಿಂಚುವ ನಕ್ಷತ್ರಗಳು, ಕತ್ತಲಿನಿಂದ ರಕ್ಷಿಸುವ ಸೂರ್ಯ ಭೂಮಿಗೆ ನೀರು ಸುರಿಸಿ ಭೂಮಿಯನ್ನು ಹಸಿರಿನ ಹಾಸಿಗೆಯನ್ನಾಗಿ ಮಾಡುವ ಮೋಡ, ಹೀಗೆ ಇಂದಿಗೂ ಎಲ್ಲಾ ಗ್ರಾಮದೇವತೆಗಳ ಗುಡಿ ಮುಂದೆ ಗುಡಿಯ ಮೇಲೆ ಸಿಂಹ, ಹುಲಿ, ಆನೆ, ಹಾಗೂ ಗುಡಿಯ ಕಂಭಕ್ಕೆ ಸೂರ್ಯ ಚಂದ್ರರ ಚಿತ್ರ ಇರುವುದನ್ನು ಕಾಣುತ್ತೇವೆ. ಸೂರ್ಯ ಜಗತ್ತಿನ ಪುರಾತನ ಜನರ ಆರಾಧ್ಯ ದೈವನಾಗಿದ್ದನೆನ್ನಲಿಕ್ಕೆ "ಇಂಗ್ಲೆಂಡಿ"ನ ಸಾಲಿಸಬೆರಿ ಬಯಲಿನಲ್ಲಿರುವ ಸ್ಟೋನ್‌ಹೆಂಚ್ ಎಂಬ ಪುರಾತನರ ಸೂರ್ಯ ದೇವಾಲಯ ಇಂದಿಗೂ ಸಾಕ್ಷಿಯಾಗಿ ನಿಂತಿದೆ. ಇಷ್ಟೆ ಅಲ್ಲದೆ ಹಳ್ಳಿಗಳಲ್ಲಿ ಇವತ್ತಿಗೂ ಜನರು ಜಳಕ ಮಾಡಿದ ಕೂಡಲೇ ಹೊರಗೆ ಬಂದು ಸೂರ್ಯನಿಗೆ ನಮಸ್ಕಾರ ಮಾಡುವುದನ್ನು ನೋಡಬಹುದು. "ಮಾನವರು ಫ್ರಾನ್ಸಿನ ನೈಸರ್ಗಿಕ ಗುಹೆಗಳ ಮಟ್ಟಿಗೆ ಮತ್ತು ಗೋಡೆಗಳ ಮೇಲೆ ತಾವು ಕಂಡ ಪ್ರಾಣಿಗಳ ಅಸಂಖ್ಯಾತ ಚಿತ್ರಗಳನ್ನು ಬರೆದಿದ್ದಾರೆ". ತಾವು ಬೇಟೆಯಾಡುವ ಪ್ರಾಣಿಯ ಶಕ್ತಿ ತಮಗೆ ವಶವಾಗಲೆಂದು, ಅದನ್ನೆ ದೇವರೆಂದು ಚಿತ್ರವನ್ನು ಕೊರೆದು ಪೂಜಿಸುತ್ತಿದ್ದರು. ಕರಡಿಗಳ ತೊಗಲನ್ನು ಧರಿಸಿ ಅದರಂತೆ ಕುಣಿದಾಡಿ, ಆ ಕರಡಿಯನ್ನೇ ದೇವತೆಯೆಂದು ತಿಳಿದು ಪೂಜಿಸುತ್ತ ಆ ಕರಡಿಗಳೆಲ್ಲ ವಶವಾಗಲೆಂದು ಬೇಡುತ್ತಿದ್ದರು." ಆದಿಮಾನವನಿಗೆ ಭಯವನ್ನುಂಟುಮಾಡಿದ ಉಪಕಾರವನ್ನುಂಟುಮಾಡಿದ ಕ್ರೂರ ಪ್ರಾಣಿಗಳೆಲ್ಲ ದೈವತ್ವವನ್ನು ಹೊಂದಿ, ಆಯಾ ದೇಶದ ಜನಾಂಗದ ದೇವರಾಗಿ ಕುಳಿತದ್ದು ಜಾಗತಿನ ಆದಿವಾಸಿಗಳ ಜೀವನ ರೀತಿಯನ್ನು ಅಧ್ಯಯನ ಅವಲೋಕನ ಮಾಡಿದಾಗ ಗೊತ್ತಾಗುತ್ತದೆ.

ಅನೇಕ ಗ್ರಾಮದೇವತೆಗಳು ಅತಿ ಪ್ರಾಚೀನವಾದ ಭೂಮಿ ಪೂಜೆ ಅಥವಾ ಮಾತೃಪೂಜೆಯ ಕುರುಹುಗಳಲ್ಲದೆ, ಬೇರೆಯಲ್ಲ ಕೆಲವೊಮ್ಮೆ ಅವು ಫಲಶಕ್ತಿಯ ಸ್ಪಷ್ಟ ಪ್ರತೀಕಗಳಂತೆ ಕಾಣುತ್ತವೆ. ಅರಣ್ಯವಾಸಿಗಳಾದ ಬುಡಕಟ್ಟು ಜನಾಂಗಗಳು ಪೂಜಿಸುವ ಪ್ರೇತಾತ್ಮಗಳು ಗ್ರಾಮಸಮುದಾಯಗಳು ಬೆಳೆದ ಮೇಲೆ ಗ್ರಾಮದೇವತೆಗಳಾಗಿ ಮಾರ್ಪಾಟು ಹೊಂದಿರುವ ಸಾಧ್ಯತೆಗಳಿವೆ, ಅಥವಾ ಐತಿಹಾಸಿಕ ಕಾಲದಲ್ಲಿ ನಡೆದ ಕೆಲವು ಘಟನೆಗಳು ಹಾಗೂ ಆಕಸ್ಮಿಕಗಳು ಕೂಡ ಇಂಥ ದೇವತೆಗಳನ್ನು ಸೃಷ್ಟಿಸಿರಬಹುದು, ಕೆಲವೊಮ್ಮೆ ಕಾಲು ಜಾರಿ ಬಿದ್ದು ಅಥವಾ ಸಿಡಿಲು ಬಡಿದು ಅಥವಾ ಇತರ ಆಕಸ್ಮಿಕ ಸಿಕ್ಕು ಅಪಮೃತ್ಯುವಿಗೆ ತುತ್ತಾಗಬಹುದು. ಇನ್ನೂ ಹಲವಾರು ಬಗೆಗಳಲ್ಲಿ ನಿರಪರಾಧಿಗಳು

ಸಾಯಬಹುದು. ಹೀಗೆ ಸತ್ತವರ ಪ್ರೇತಾತ್ಮಗಳು ಜನರಲ್ಲಿ ಭಯಭಕ್ತಿಯನ್ನು ಹುಟ್ಟಿಸಿ ಅವರಿಂದ ಪೂಜೆಯನ್ನು ಪಡೆಯಬಹುದು." ಇದರ ಜೊತೆಗೆ ಚಾರಿತ್ರಿಕ ವ್ಯಕ್ತಿಗಳು ಮೃತರಾದ ನಂತರ ಹಲವು ವರ್ಷಗಳ ನಂತರ ಇವುಗಳೆಲ್ಲವೂ ಗ್ರಾಮದೇವತೆಗಳನಿಸಿಕೊಂಡಿರಬಹುದು. ಹಾಗೆಯೇ ಮಹಾಸತಿಯರಾದ ಹೆಣ್ಣುಮಕ್ಕಳು ಗ್ರಾಮದೇವತೆಯರಾಗಿದ್ದಾರೆ. ಹೀಗೆ ಗ್ರಾಮದೇವತೆಗಳ ಉಗಮದ ಇತಿಹಾಸವನ್ನು ಸ್ಪಷ್ಟಪಡಿಸಬೇಕಾದರೆ ಮಾತೃಪ್ರಧಾನ ಕುಟುಂಬ ವ್ಯವಸ್ಥೆಯ ಪರಿಣಾಮಗಳನ್ನು ಪರಿಶೀಲಿಸುವುದು ಅತ್ಯಂತ ಮುಖ್ಯವಾಗುತ್ತದೆ.

ಭಾರತದಲ್ಲಿ ಕೃಷಿ ಆರ್ಥಿಕ ಚಟುವಟಿಕೆಯಾಗಿ ರೂಪುಗೊಳ್ಳುವುದರಿಂದ ಶಾಕ್ತ ಪಂಥಗಳು ತಲೆ ಎತ್ತಿ ನಿಂತುಕೊಂಡವು, ಈಜಿಪ್ಟ್‌ನಲ್ಲಿ ರೂಪುಗೊಂಡ "ಇಸಿಸ್" ದೇವತೆಯ ಕಲ್ಪನೆ, ಫ್ರಿಜಿಯಾದಲ್ಲಿ ಸಿಬಿಲೇ ದೇವತೆಯ ಕಲ್ಪನೆ ಭಾರತದ ಶಕ್ತಿ ದೇವತೆಯ ಕಲ್ಪನೆಗೆ ಸಮಾನ ಪರಿಕಲ್ಪನೆಗಳಾಗಿದೆ. ಶಾಕ್ತಧರ್ಮವು ದೇವತೆಯನ್ನು ಪ್ರಪಂಚದ ಮೂಲ ಶಕ್ತಿಯ ಸಾಕಾರ ರೂಪವನ್ನಾಗಿ, ಲೋಕದ ದೈವಿಕ ಮತ್ತು ಜೈವಿಕ ಬೆಳವಣಿಗೆಯ ಮೂಲ ಶಕ್ತಿಯನ್ನಾಗಿ ಪರಿಗಣಿಸುತ್ತದೆ. ಕೃಷಿ ಜನಾಂಗವೊಂದರ ಮಾತೃ ಪ್ರಧಾನ ಕುಟುಂಬ ವ್ಯವಸ್ಥೆಯ ಪರಿಣಾಮವೇ ಇದಾಗಿರಬೇಕು, ಪ್ರಾಚೀನ ಸಮಾಜದಲ್ಲಿ ಮುಕ್ತ ಲೈಂಗಿಕತೆಯಿದ್ದು ಆಯಾ ಗುಂಪುಗಳ ಸ್ತ್ರೀಯರ ಮೂಲಕ ನಿಯಂತ್ರಿಸಲ್ಪಡುತ್ತಿದ್ದುದರಿಂದ ಆಗ ಮಾತೃಪ್ರಧಾನ ಕುಟುಂಬ ವ್ಯವಸ್ಥೆಯು ಜಾರಿಯಲ್ಲಿತ್ತು. ಮಕ್ಕಳನ್ನು ಹೆತ್ತ ತಾಯಿಯನ್ನು ಮಾತ್ರ ಗುರಿತಿಸಲು ಸಾಧ್ಯವಿದ್ದಿದ್ದು ಈ ದೇವತೆಗಳ ಹುಟ್ಟಿಗೆ ಕಾರಣವಿರಬೇಕು ಎಂಬುದನ್ನು ತಿಳಿಯಬಹುದು.

ಮನುಷ್ಯನು ಪ್ರಥಮ ಆರ್ಥಿಕ ಚಟುವಟಿಕೆಯಾದ ಆಹಾರ ಸಂಗ್ರಹಣೆಯ ಹಂತದಲ್ಲಿ ಸ್ತ್ರೀಯ ಪಾತ್ರ ಪ್ರಧಾನವಾಗಿತ್ತು, ಅಂದರೆ ಮಕ್ಕಳನ್ನು ಹೆರುವುದಲ್ಲದೆ ಅವರನ್ನು ಪಾಲನೆ ಮಾಡುವ ಮತ್ತು ಬೆಳೆಸುವಂತ ಹೊಣೆಗಾರಿಕೆ ಅವಳದಾಗಿತ್ತು. ಸಮಾಜದಲ್ಲಿರುವ ಎಲ್ಲಾ ಪದ್ದತಿ ಸಂಸ್ಕೃತಿ ಸಂಪ್ರದಾಯಗಳು ಮೊದಲು ಹೆಣ್ಣಿನ ಮೂಲಕವೆ ಸಂವಹನಗೊಳ್ಳುತ್ತಿದ್ದವು, ಹೆಣ್ಣು ಕೇವಲ ಒಂದು ಜನಾಂಗದ ಸಂಕೇತವಷ್ಟೇ ಅಲ್ಲ ಜೀವೋತ್ಪತ್ತಿಯ ಮೂಲ ಶಕ್ತಿಯಾಗಿದ್ದಳು, ಆಕೆಯ ಅಂಗಾಂಗಗಳು ಮತ್ತು ಗುಣಶಕ್ತಿಗಳಿಗೆ ಸೃಷ್ಟಿಶಕ್ತಿಯ ಸಾಮರ್ಥ್ಯವಿದೆಯೆಂದು ಭಾವಿಸಲಾಯಿತು. ಅವುಗಳನ್ನು ಚೈತನ್ಯ ಶಕ್ತಿಯ ಸಂಕೇತಗಳೆಂದು ತಿಳಿಸಲಾಯಿತು, ಸಮಾಜದ ಬೆಳವಣಿಗೆಯನ್ನು ನೋಡಿದಾಗ ಮೊದಲ ಹಂತದಲ್ಲಿ ಮಾತೃ ಧರ್ಮವೇ ಧರ್ಮದ ಕೇಂದ್ರಸ್ಥಾನದಲ್ಲಿದ್ದಳು. ಅವಳ ಮುಖ್ಯವಾದ ಕಾರ್ಯ ಆಹಾರ ಸಂಗ್ರಹಣೆ ಮತ್ತು ಆಹಾರದ ಉತ್ಪಾದನೆ ಸ್ತ್ರೀಯ ಕರ್ತವ್ಯವಾಗಿತ್ತು. ಅದಕ್ಕಾಗಿ ಸ್ತ್ರೀಯ ಸ್ಥಾನಮಾನ ಪ್ರಧಾನ್ಯವಾಗಿತ್ತು. ಇದರಿಂದ ಅವಳನ್ನು ದೈವತ್ವಕ್ಕೇರಿಸುವವರೆಗೆ ಹೋಯಿತು. ಮಾತೃ ಪ್ರಾಧಾನ್ಯವು ಹಾಗೂ ಗ್ರಾಮದೇವತೆಗಳು ಜಗತ್ತಿನ ಯಾವುದೇ ದೇಶಕ್ಕಿಂತ ಭಾರತ ದೇಶದಲ್ಲಿ ವಿಪುಲವಾಗಿವೆಂದು ವಿದ್ವಾಂಸರು ಭಾವಿಸುತ್ತಾರೆ.

**ಆಕಾರ ಗ್ರಂಥಗಳು**

1. ಗ್ರಾಮ ದೇವತೆಗಳು – ಡಾ. ಸಿದ್ದಲಿಂಗಯ್ಯ
2. ಹೈದರಾಬಾದ ಕರ್ನಾಟಕದ ಗ್ರಾಮದೇವತೆಗಳ ಜಾನಪದೀಯ ಅಧ್ಯಯನ– ವಾಲೀಕಾರ ಚೆನ್ನಣ್ಣನ
3. ಮೂರುಜಾವಿ ದೇವರ ಪರಂಪರೆ – ಮನೋಹರ ಎಸ್. ದೊಡ್ಡಮನ್ನಿ